



■ ಗ. ಮ. ತುಂಬೇಮನೆ

# ಬೆಟ್ಟ–ಬಯಲು ಹಳದಿಯ ಹೊನಲು

ಮಳೆ ಬಿತ್ತೆಂದರೆ ಸಾಕು, ಮಲೆನಾಡ ಬೆಟ್ಟಗಳಲ್ಲಿ ಜೀವಸಂಚಾರ, ಹೂವಿನ ಅಲಂಕಾರ. ಕೆಲವೊಮ್ಮೆ ಒಂದೇ ವರ್ಣದ ಹೂಗಳ ಅಲಂಕಾರದಿಂದ ಬೆಟ್ಟ–ಬಯಲುಗಳು ಕಂಗೊಳಿಸುತ್ತವೆ. ಹಳದಿ ಹೂಗಳಿಂದ ಹಸಿರನ್ನೇ ಮುಚ್ಚಿಬಿಡುವ ಕಾಡು ತೊಗರಿಯ ಗಿಡಗಳ ಎಕರೆಗಟ್ಟಲೆ ಮೈದಾನವನ್ನು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಸನಿಹದಲ್ಲಿ ನೋಡಬಹುದು.

ಹಸಿರು ಭತ್ತದ ಗದ್ದೆಯ ಇಕ್ಕೆಡೆಗಳಲ್ಲಿ ಹಳದಿ ಹೂಗಳ ವಿಸ್ತಾರ ಪಟ್ಟಿಗಳು ಹೊಸ ಲೋಕವನ್ನೇ ಸೃಷ್ಟಿಸುತ್ತವೆ. ಎಲ್ಲ ಮಳೆಗಾಲದಲ್ಲೂ ಈ ಹಳದಿ ಹೂವಿನ ಲೋಕ ಸೃಷ್ಟಿಯಾಗುವುದಿಲ್ಲ. ಆಯಾ ವರ್ಷದ ಮಳೆಯ ಪ್ರಮಾಣ ಹಾಗೂ ಬಿಸಿಲಿನ ಪ್ರಖರತೆಗಳನ್ನವಲಂಬಿಸಿ ಹಳದಿ ಹೂಗಳ ಬಳಗ ರೂಪುಗೊಳ್ಳುತ್ತದೆ. ಮಣ್ಣಿನ ಗುಣಧರ್ಮವೂ ಈ ಹೂ ಗಿಡಗಳಿಗೆ ಮುಖ್ಯ.

ಕಾಡು ತೊಗರಿಯ ಗಿಡಗಳೆಂದರೆ ಎಮ್ಮೆ ದನಗಳಿಗೆ ತುಂಬಾ ಪ್ರೀತಿ. ರಾತ್ರಿ ವೇಳೆ ಕಾಡೆಮ್ಮೆಗಳು ದಾಳಿಯಿಟ್ಟರೆ ಗಿಡಗಳ ಕುರುಹು ಕಾಣದಂತೆ ಮೇಯ್ದು ಹೋಗುತ್ತವೆ. ಹಾಗಾಗಿ ಹೂಗಳ ಹಾಸಿನ ಮಧ್ಯೆ ಅಲ್ಲಲ್ಲಿ ಖಾಲಿ ಜಾಗ ಗೋಚರಿಸುವುದು. ಹಳದಿ ಹೂಗಳ ಸಾಮ್ರಾಜ್ಯದ ನಡುವೆ ಕೆಲವು ಜಾಗಗಳಲ್ಲಿ ಕೆಂಪು ಹೂಗಳೂ ತಮ್ಮ ಪುಟ್ಟ ರಾಜ್ಯವನ್ನು ಸ್ಥಾಪಿಸಿಬಿಡುತ್ತವೆ. ಕೆಂಪು ಹೂಗಳು ಹಳದಿ ಹೂವಿನಷ್ಟು ದಟ್ಟವಾಗಿ ಅರಳುವುದಿಲ್ಲ. ಹಸಿರು ಹುಲ್ಲಿನ ನಡುವೆ ಅನೇಕ ಬಣ್ಣದ ಹೂಗಳು ಅರಳಿ ನಳನಳಿಸುತ್ತಿರುತ್ತವೆ. ಆದರೆ ಅವುಗಳು ಹಸಿರನ್ನು ಮೀರಿಸುವಷ್ಟು ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವಷ್ಟು ಶಕ್ತಿಯಿರುವುದಿಲ್ಲ. ■



ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.

ಅರೆಕಾ ಟೀ ಒಂದು ಉತ್ತಮ ಆಯ್ಕೆ




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್,
ನಿಂಬೆ ಮತ್ತು ತುಳಸಿ




WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket | Flipkart
www.arecatea.in ನಲ್ಲೂ ಲಭ್ಯ